**<u>ದಿನಾಂಕಃ 13.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ **ವಾದಿ ಪರ** ಶ್ರೀ ಎಸ್ ಜೆ **ವಕೀಲರಿಂದಃ**</u>

ಸರ್ವೆ ನಂ.96/3 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.96/3 ರ ಜಮೀನಿನಲ್ಲಿ ಎಷ್ಟು ಜನರಿಗೆ ಹಕ್ಕು ಇತ್ತು ಎಂದು ನನಗೆ ಗೊತ್ತಿಲ್ಲ. ನಿಡಿ-27 ರ ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ನಾನೇ ಹೇಳಿ ಬರೆಸಿರುತ್ತೇನೆ. 1988 ರಿಂದ 2024 ರವರೆಗಿನ ಕಂದಾಯ ಪಾವತಿ ರಶೀದಿಗಳು ನನ್ನ ಬಳಿ ಇರುತ್ತವೆ. ಸದರಿ ಕಂದಾಯ ಪಾವತಿ ರಶೀದಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ವಾರ್ಷಿಕ ಕಂದಾಯ ಎಷ್ಟು ಎಂದು ನನಗೆ ಗೊತ್ತಿಲ್ಲ. ನಿಡಿ-28 ರಿಂದ ನಿಡಿ-30 ರ ದಾಖಲಾತಿಗಳ ಮೂಲಕ ನಾನು ಎಷ್ಟು ವರ್ಷದ ಕಂದಾಯ ಪಾವತಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳನ್ನು ಕಳೆದ ವರ್ಷ ತೆಗೆಸಿರುತ್ತೇನೆ. ಸದರಿ ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳನ್ನು ನಾನು ನಮ್ಮ ಹುಡುಗನ ಕೈಯಲ್ಲಿ ತೆಗೆಸಿರುತ್ತೇನೆ. ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂದರೆ ಸರಿ. ವಾದಿಗಳು ಬೆಳೆದಿರುವ ಬೆಳೆ ಮತ್ತು ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳಲ್ಲಿ ಬೆಳೆದಿರುವ ಬೆಳೆ ಬೇರೆ ಬೇರೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ನಮಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತಹ ಭಾವಚಿತ್ರಗಳಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸುವ ಸಂಧರ್ಬದಲ್ಲಿ ನಿಡಿ-31 ರಿಂದ ನಿಡಿ-34 ರ ಭಾವಚಿತ್ರಗಳನ್ನು ಸಲ್ಲಿಸಲು ತೊಂದರೆ ಇರಲಿಲ್ಲ. ನಿಡಿ-27 ರಿಂದ ನಿಡಿ-35 ರ ದಾಖಲಾತಿಗಳನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ